ಹೇಳಿದ್ದೆ, ನನಗೆ ದೊಡ್ಡ ದೊಡ್ಡ ಡೈಲಾಗ್ ಕೊಡಬೇಡಿ ಎಂದು. ಅಪ್ಪ, ದೊಡ್ಡಪ್ಪನ ದೊಡ್ಡ ಅಭಿಮಾನಿ ನಾನು. ಆದರೆ ಅದೇ ದಾರಿಯಲ್ಲಿ ಹೋಗುವ ಬದಲು ನನಗೆ ಏನು ಬರುತ್ತೋ ಅದರ ಮೇಲೆ ವರ್ಕ್ ಮಾಡಿದ್ದೇನೆ. ರವಿಶಂಕರ್ ಮಗ, ಸಾಯಿಕುಮಾರ್ ತಮ್ಮನ ಮಗ ಎಂಬ 'ಟ್ಯಾಗ್' ಹೊರತಾಗಿ ಭಿನ್ನವಾಗಿ ಕಾಣಿಸಿಕೊಳ್ಳುವ, ಒಂದು ಪರ್ಸನಾಲಿಟಿ ರೂಪಿಸಿಕೊಳ್ಳುವ ಪರಿಶ್ರಮ ಖಂಡಿತ ನನ್ನ ಕಡೆಯಿಂದ ಇದ್ದೇ ಇರುತ್ತದೆ'' ಎನ್ನುತ್ತಾರೆ.

ಕಲಾವಿದರ ಕುಟುಂಬದಲ್ಲೇ ಜನಿಸಿದರೂ ಸವಾಲುಗಳು ಇದ್ದೇ ಇರುತ್ತವೆ ಎನ್ನುವುದು ಅವರ ಅನುಭವ. ''ನಟನೆಗಿಳಿದ ಮೇಲೆ ಪ್ರಾಕ್ಟಿಕಲ್ ಆಗಿ ಅನುಭವಗಳು ಆಗುತ್ತವೆ. ಕ್ಯಾಮೆರಾ ಫೇವರ್ ಆಗುವುದು ಇಲ್ಲಿ ತುಂಬಾ ಮುಖ್ಯ. ನಾಟಕದಲ್ಲಿ ನಾನು ಹೆಚ್ಚು ತೊಡಗಿಕೊಂಡಿದ್ದೆ. ಲೈವ್ ಪರ್ಫಾರ್ಮೆನ್ಸ್ ನೀಡುತ್ತಿದ್ದೆ. ಆದರೆ ಕ್ಯಾಮೆರಾದ್ದೇ ಬೇರೆ ಆಟ. ನಾಟಕದಲ್ಲಿ ನಟನೆ ಹೆಚ್ಚಿದ್ದಷ್ಟೂ ಚೆಂದ. ಕ್ಯಾಮೆರಾದಲ್ಲಿ 'ಲೆಸ್ ಇಸ್ ಮೋರ್' ಎನ್ನುತ್ತಾರೆ. ಇಂಥ ಕೆಲವು ಸಣ್ಣ ಸಣ್ಣ ಸಂಗತಿಗಳು ಬಹಳ ಮುಖ್ಯ'' ಎಂದು ತಮ್ಮ ಅನುಭವಗಳನ್ನು ತೆರೆದಿಡುತ್ತಾರೆ.

ಸದ್ಯ 'ಸುಬ್ರಹ್ಮಣ್ಯ' ಸಿನಿಮಾ ಚಿತ್ರೀಕರಣದಲ್ಲಿ ಬ್ಯುಸಿಯಾಗಿರುವ ಅದ್ವೆ ಅವರಿಗೆ ಮುಂದೆ ಐತಿಹಾಸಿಕ ಸಿನಿಮಾಗಳಲ್ಲಿ ನಟಿಸುವ ಕನಸು. ಮಹಾಭಾರತದ ಅಭಿಮನ್ಯು, ಅರ್ಜುನನಂಥ ಪಾತ್ರಗಳನ್ನು ನಿರ್ವಹಿಸಬೇಕು, ಒಳ್ಳೆಯ ಸಿನಿಮಾಗಳನ್ನು ನೀಡಬೇಕು. ಜೊತೆಗೆ ಕಂಟೆಂಟ್ ಆಧರಿತ ಸಿನಿಮಾಗಳಲ್ಲಿ ನಟಿಸಿ ಉತ್ತಮ ಕಲಾವಿದ ಎನಿಸಿಕೊಳ್ಳಬೇಕು ಎಂಬ ಬಯಕೆ.

'ಈಗ ಕಥೆಯೇ ಕಿಂಗ್. ಎಷ್ಟು ಬಜೆಟ್ ಹಾಕಿ ಸಿನಿಮಾ ಮಾಡಿದರೂ ಸ್ಕ್ರಿಪ್ಟ್ ಚೆನ್ನಾಗಿಲ್ಲ ಎಂದರೆ ಸಿನಿಮಾ ಗೆಲ್ಲುವುದಿಲ್ಲ. ಸ್ಕ್ರಿಪ್ಟ್ ಆತ್ಮವಾದರೆ, ಮಿಕ್ಕಿದ್ದು ಶರೀರ. ಆತ್ಮ ಚೆನ್ನಾಗಿದ್ದರೆ ಮಾತ್ರ ಶರೀರವೂ ಚೆನ್ನಾಗಿರಲು ಸಾಧ್ಯ. ಹೀಗಾಗಿ ಕಥೆಗೇ ನನ್ನ ಆದ್ಯತೆ' ಎನ್ನುತ್ತಾರೆ. ಜೊತೆಗೆ, 'ಶಿಸ್ತು, ಸಮಯ ಪರಿಪಾಲನೆ ಮಾಡಬೇಕು. ಎಲ್ಲರಿಗೂ ಗೌರವ ನೀಡಬೇಕು. ಆಗಿದ್ದಾಗ ಮಾತ್ರ ಸಿನಿಮಾರಂಗದಲ್ಲಿ ಬೆಳೆಯಲು ಸಾಧ್ಯ' ಎಂದು ಶೂಟಿಂಗ್ ಮೊದಲ ದಿನ ಅಪ್ಪ ಹೇಳಿದ ಕಿವಿಮಾತನ್ನು ಸದಾ ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡುವುದಾಗಿ ಹೇಳುತ್ತಾರೆ. ■



# ಮತ್ತೆ ಒಂದಾದ 'ವಿಕ್ರಾಂತ್ ರೋಣ' ಜೋಡಿ

'ವಿಕ್ರಾಂತ್ ರೋಣ' ಸಿನಿಮಾ ನಂತರ ಇದೀಗ ಕಿಚ್ಚ ಸುದೀಪ್ ಹಾಗೂ ಅನೂಪ್ ಭಂಡಾರಿ ಜೋಡಿ 'ಬಿಲ್ಲ ರಂಗ ಭಾಷಾ' ಸಿನಿಮಾ ಮೂಲಕ ಒಂದಾಗುತ್ತಿದ್ದು, ಸುದೀಪ್ ಅಭಿಮಾನಿಗಳಲ್ಲಿ ಪುಳಕ ಹುಟ್ಟಿಸಿದೆ.

'ರಂಗಿತರಂಗ', 'ವಿಕ್ರಾಂತ್ ರೋಣ' ಸಿನಿಮಾ ಖ್ಯಾತಿಯ ಅನೂಪ್ ಅವರ ಹೊಸ ಸಿನಿಮಾಗೆ ಸುದೀಪ್ ನಾಯಕನಾಗಿದ್ದು, ಟಾಲಿವುಡ್ ನಿರ್ಮಾಪಕರಾದ ನಿರಂಜನ್ ರೆಡ್ಡಿ ಹಾಗೂ ಚೈತನ್ಯ ರೆಡ್ಡಿ ಈ ಸಿನಿಮಾ ನಿರ್ಮಾಣದಲ್ಲಿ ಒಂದಾಗಿದ್ದಾರೆ.

ಸುದೀಪ್ ಕೂಡ ಈ ಚಿತ್ರ ಅವರ ಸಿನಿ ಕರಿಯರ್‌ನ ಬಹುದೊಡ್ಡ ಬಜೆಟ್ ಸಿನಿಮಾ ಎಂದಿರುವುದು ಸಹಜವಾಗಿಯೇ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚಿಸಿದೆ.

'ಬಿಲ್ಲ ರಂಗ ಭಾಷಾ' ಸಿನಿಮಾ ಬಗ್ಗೆ ಮಾತನಾಡಿರುವ ಅನೂಪ್ ಭಂಡಾರಿ, ''ವಿಕ್ರಾಂತ್ ರೋಣ' ಸಿನಿಮಾ ನಂತರ 'ಹನುಮಾನ್' ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸದ ಸಮಯದಲ್ಲಿ ನಿರ್ಮಾಪಕರಾದ ನಿರಂಜನ್ ರೆಡ್ಡಿ ನನ್ನನ್ನು ಭೇಟಿಯಾದರು. ನಾನು ಸುದೀಪ್ ಸರ್‌ಗೆ ಸಿನಿಮಾ ಮಾಡುತ್ತಿರುವುದಾಗಿ ಹಾಗೂ 'ಬಿಲ್ಲ ರಂಗ ಭಾಷಾ' ಕಥೆ ಹೇಳಿದಾಗ ಅವರು ಎಕ್ಸೈಟ್ ಆದರು. ಅದ್ಧೂರಿಯಾಗಿ ಚಿತ್ರ ನಿರ್ಮಾಣ ಮಾಡುವುದಾಗಿ ತಿಳಿಸಿದರು. ಸುದೀಪ್ ಸರ್ ಜೊತೆ ಕೆಲಸ ಮಾಡುವುದು ಅದ್ಭುತ ಅನುಭವ. ಜನರು 'ವಿಕ್ರಾಂತ್ ರೋಣ' ಸಿನಿಮಾ ಇಷ್ಟಪಟ್ಟಿದ್ದಾರೆ. ಸುದೀಪ್ ಸರ್ ಈ ಚಿತ್ರವನ್ನು ದೊಡ್ಡ ಚಿತ್ರ ಎಂದಿರುವುದು ನನಗೆ ಜವಾಬ್ದಾರಿ ಜಾಸ್ತಿ ಮಾಡಿದೆ'' ಎಂದಿದ್ದಾರೆ.

'ಬಿಲ್ಲ ರಂಗ ಭಾಷಾ' ಬಹುಭಾಷೆಯಲ್ಲಿ ನಿರ್ಮಾಣವಾಗುತ್ತಿದ್ದು, ಶೀಘ್ರದಲ್ಲೇ ಶೂಟಿಂಗ್ ಆರಂಭಗೊಳ್ಳಲಿರುವುದಾಗಿ ಮಾಹಿತಿ ನೀಡಿದೆ ಚಿತ್ರತಂಡ. ■

# ಹೊಸ ಕೆಮಿಸ್ಟ್ರಿಯ 'ಕಲ್ಟ್'



'ಕ್ರಾಂತಿ' ಹಾಗೂ 'ಮ್ಯಾಟ್ನಿ' ಸಿನಿಮಾ ನಂತರ 'ಸಂಜು ವೆಡ್ಸ್ ಗೀತಾ 2' ಚಿತ್ರದಲ್ಲಿ ಬ್ಯುಸಿಯಾಗಿರುವ ಗುಳಿಕೆನ್ನೆ ಚೆಲುವೆ ನಟಿ ರಚಿತಾ ರಾಮ್ ಇದೀಗ ಮತ್ತೊಂದು ಸಿನಿಮಾಗೆ ಸಹಿ ಹಾಕಿದ್ದಾರೆ. 'ಬನಾರಸ್' ಸಿನಿಮಾದಿಂದ ಚಂದನವನಕ್ಕೆ ಕಾಲಿಟ್ಟಿದ್ದ ನಟ ಝೈದ್ ಖಾನ್‌ಗೆ ಜೋಡಿಯಾಗಿ ರಚಿತಾ ರಾಮ್ ಕಾಣಿಸಿಕೊಳ್ಳಲಿದ್ದು, ತೆರೆ ಮೇಲೆ ಇಬ್ಬರ ಫ್ರೆಷ್ ಕೆಮಿಸ್ಟ್ರಿ ಹೇಗಿರಲಿದೆ ಎಂಬ ಕುತೂಹಲ ಹುಟ್ಟುಹಾಕಿದೆ.

'ಕಲ್ಟ್' ಎಂದು ಸಿನಿಮಾಗೆ ಶೀರ್ಷಿಕೆ ನೀಡಲಾಗಿದ್ದು, 'ಉಪಾಧ್ಯಕ್ಷ' ಸಿನಿಮಾದ ಅನಿಲ್ ಕುಮಾರ್ ನಿರ್ದೇಶನ ಮಾಡಲಿದ್ದಾರೆ. ಕಮರ್ಷಿಯಲ್ ಎಂಟರ್‌ಟೇನರ್ ಸಿನಿಮಾ ಇದಾಗಿದ್ದು, ನಟಿ ಮಲ್ಲಿಕಾ ವಸುಪಾಲ್ ಕೂಡ ಸಿನಿಮಾ ಭಾಗವಾಗಿದ್ದಾರೆ.

'ಬನಾರಸ್' ಸಿನಿಮಾ ನಂತರ ಹೊಸತೊಂದು ಜಾನರ್ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿರುವುದಾಗಿ ಹೇಳಿರುವ ಝೈದ್, 'ಕಲ್ಟ್ ಸಿನಿಮಾದ್ದು ಥಿಯೇಟರ್‌ನಲ್ಲಿ ಶಿಳ್ಳೆ, ಚಪ್ಪಾಳೆ ತುಂಬಿಸಬಲ್ಲ ಕಥೆ' ಎಂದಿದ್ದಾರೆ. ಸದ್ಯ ಈ ಸಿನಿಮಾ ನಂತರ ಬ್ಯಾಕ್ ಟು ಬ್ಯಾಕ್ ಮೂರು ಸಿನಿಮಾಗಳು ಅವರ ಕೈಯಲ್ಲಿವೆ. ರಚಿತಾ ಕೂಡ ಹಲವು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದು, ಜಡೇಶ್ ಹಂಪಿ ನಿರ್ದೇಶನದ ಮತ್ತೊಂದು ಸಿನಿಮಾ ಅವರ ಲಿಸ್ಟ್‌ನಲ್ಲಿದೆ. ■